# ಉಡುಗೆಗೆ ಗುಬ್ಬಿ ತೋಳಿನ ಮೆರುಗು

**ಉಡುಪಿನಲ್ಲಿ ಕೆಲವು ವಿನ್ಯಾಸಗಳು ಹಳೆಯ ಕಾಲದ್ದಾದರೂ ಕಾಲ ಕಾಲಕ್ಕೆ ಅಪ್‌ಡೇಟ್ ಆಗುತ್ತ ತಮ್ಮದೇ ಶೈಲಿಯನ್ನು ಬಿಂಬಿಸುತ್ತ ಅಸ್ಮಿತೆಯನ್ನು ಕಾಪಿಟ್ಟುಕೊಂಡಿರುತ್ತವೆ. ಇದಕ್ಕೆ ಸ್ಪಷ್ಟ ಉದಾಹರಣೆ 'ಪಫ್ ಸ್ಲೀವ್ಸ್'.**

**■ ಸುಮಾ ಬಿ.**



ಕರುನಾಡಿನ ಬಹುತೇಕರ ಬಾಯಲ್ಲಿ 'ಗುಬ್ಬಿ ತೋಳು' ಎಂತಲೇ ನಲಿದಾಡುವ 'ಪಫ್ ಸ್ಲೀವ್' ಈಗ ಫ್ಯಾಷನ್‌ಪ್ರಿಯರ ಹಾಟ್ ಫೇವರೆಟ್. ಚಿಕ್ಕ ಮಕ್ಕಳಿಂದ ಹಿಡಿದು ಇಳಿವಯಸ್ಕರಾದಿಯಾಗಿ ಎಲ್ಲರನ್ನೂ ಬರ ಸೆಳೆಯುವ ವಿನ್ಯಾಸವಿದು. ಅದಕ್ಕೆ ಕಾರಣವೂ ಇಲ್ಲದಿಲ್ಲ. ಇಂಥದ್ದೇ ಉಡುಗೆಗೆ ಮಾತ್ರ ಹೊಂದಿಕೊಳ್ಳುವೆ ಎನ್ನುವ ಬಿಗುಮಾನ 'ಪಫ್ ಸ್ಲೀವ್'ನದ್ದಲ್ಲ. ಸಾಂಪ್ರದಾಯಿಕಕ್ಕೂ, ಆಧುನಿಕತೆಗೂ ಒಗ್ಗಿಕೊಳ್ಳುವ 'ದೊಡ್ಡ ಗುಣ' ಅದರದ್ದು. ಬೇಸಿಗೆ, ಮಳೆ, ಚಳಿ ಎನ್ನದೇ ಎಲ್ಲ ಕಾಲಕ್ಕೂ ಸಲ್ಲುವ, ಎಲ್ಲ ವಿನ್ಯಾಸದ ಉಡುಗೆಗೂ ಒಗ್ಗಿಕೊಳ್ಳುವ ಛಾತಿ ಅದರದ್ದು.

ಸಾಂಪ್ರದಾಯಿಕ ಸೀರೆ, ಲೆಹೆಂಗಾ, ಗಾಗ್ರಾ, ಗೌನ್, ಲಂಗ ದಾವಣಿ, ಲಂಗ ಜಾಕೆಟ್ ಹೀಗೆ ಎಲ್ಲವಕ್ಕೂ ಸೈ ಎನಿಸಿಕೊಳ್ಳುವ ಪಫ್ ಸ್ಲೀವ್ ಶಾರ್ಟ್ಸ್, ಫ್ರಾಕ್, ಲಾಂಗ್ ಫ್ರಾಕ್, ಜೀನ್ಸ್, ಪ್ಯಾಂಟ್, ಮಿನಿ ಸ್ಕರ್ಟ್, ಡೆನಿಮ್ ಹೀಗೆ ಆಧುನಿಕ ಶೈಲಿಯ ಎಲ್ಲ ಉಡುಗೆಗಳನ್ನೂ ಅಪ್ಪಿಕೊಳ್ಳುತ್ತದೆ. ನಾಮಕರಣ, ನಿಶ್ಚಿತಾರ್ಥ, ಹಬ್ಬ, ಸಣ್ಣಪುಟ್ಟ ಸಮಾರಂಭಗಳಲ್ಲಿ ಲಲನೆಯರ ಮೊದಲ ಆಯ್ಕೆ ಇದೇ ಆಗಿರುತ್ತದೆ. ಕಾಲೇಜು, ಕಚೇರಿಯೆನ್ನದೆ ನಿತ್ಯದ ಉಡುಪಿನ ಭಾಗವೇ ಆಗಿರುವ ಪಫ್ ಸ್ಲೀವ್ಸ್ ಫ್ಯಾಷನ್ ಪ್ರಿಯರ ವಾರ್ಡ್‌ರೋಬ್‌ನಲ್ಲಿ ಸ್ಥಾನಪಡೆಯದೆ ಇರದು.

ಇಷ್ಟೆಲ್ಲ 'ಗುಣ'ಗಳನ್ನು ಹೊಂದಿರುವ ಪಫ್ ಸ್ಲೀವ್ಸ್‌ನ ಇತಿಹಾಸ ಕೆದಕಿದರೆ ಪ್ರಾಚೀನ ಕಾಲಕ್ಕೆ ಕೊಂಡೊಯ್ಯುತ್ತದೆ. ವಿನ್ಯಾಸ ಪ್ರಾಚೀನ ಕಾಲದ್ದಾದರೂ ಸದಾ ಹೊಸತನಕ್ಕೆ ತೆರೆದುಕೊಳ್ಳುತ್ತ ನಿತ್ಯ ನೂತನವಾಗಿ ಕಾಣಿಕೊಳ್ಳುವ ಇದು ಪಾಶ್ಚಿಮಾತ್ಯರ ಕೊಡುಗೆ. ಕೆಲವು ವಿನ್ಯಾಸಗಳು ಹಳೆಯ ಕಾಲದ್ದಾದರೂ ಕಾಲ ಕಾಲಕ್ಕೆ ಅಪ್‌ಡೇಟ್ ಆಗುತ್ತ ತಮ್ಮದೇ ಶೈಲಿಯನ್ನು ಬಿಂಬಿಸುತ್ತ ಅಸ್ಮಿತೆಯನ್ನು ಕಾಪಿಟ್ಟುಕೊಂಡಿರುತ್ತವೆ. ಇದಕ್ಕೆ ಸ್ಪಷ್ಟ ಉದಾಹರಣೆ 'ಪಫ್ ಸ್ಲೀವ್ಸ್'.